**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.264/2019**

(ಚಾ.ಸಾ.18/ಪ್ರಾ.ಸಾ.10)

ತಾಃ25.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರುಃ | ಡಾ.ಎಸ್ ಪ್ರವೀಣ್ |
| ತಂದೆಯ ಹೆಸರು | ವೈ ಎನ್ ಶಿವರಾಮ ರೆಡ್ಡಿ |
| ವಯಸ್ಸು | 52 ವರ್ಷ |
| ಉದ್ಯೋಗ | ವೈದ್ಯಾಧಿಕಾರಿ, ಎಸ್ ಕೆ ಆಸ್ಪತ್ರೆ ಶೆಟ್ಟಿಹಳ್ಳಿ |
| ವಾಸ ಸ್ಥಳ | ಮತ್ತಿಕೆರೆ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ 8 ವರ್ಷಗಳಿಂದ ವೈದ್ಯಾಧಿಕಾರಿಯಾಗಿ ಎಸ್ ಕೆ ಆಸ್ಪತ್ರೆ ಶೆಟ್ಟಿಹಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ24.12.2018 ರಂದು ಚಾಸಾ.2 ರವರು ನನ್ನ ಬಳಿ ಬಂದಿದ್ದು ಅವರನ್ನು ಹಲ್ಲೆಯ ಹಿನ್ನಲೆಯಲ್ಲಿ ಪರೀಕ್ಷೆ ಮಾಡಿರುತ್ತೇನೆ. ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಕುತ್ತಿಗೆಯ ಮಧ್ಯ ಭಾಗದಲ್ಲಿ 15x1.7cmxmuscle deep ಹರಿದ ಗಾಯದ ತುದಿ ಭಾಗ ಹರಿತವಾಗಿ ಹರಿದಿರುತ್ತದೆ ಮತ್ತು ಅದು ರಕ್ತಸ್ರಾವದಿಂದ ಕೂಡಿರುತ್ತದೆ.

ಎಸ್.ಸಿ.ನಂ.264/2019
ಚಾ.ಸಾ.18/ಪ್ರಾ.ಸಾ.10

2. ಹಲವಾರು ಗಾಯಗಳು ಕೈ ಮತ್ತು ಮೊಣಕೈಯಲ್ಲಿ ಹರಿದ ಗಾಯ ಇತ್ತು,

2. ನನ್ನ ಪ್ರಕಾರ ಮೊದಲನೇ ಗಾಯ ತೀವ್ರ ಸ್ವರೂಪದ ಗಾಯ ಆಗಿದ್ದು, 2 ನೇ ಗಾಯ ಸಾಧಾರಣ ಸ್ವರೂಪದ ಗಾಯ ಆಗಿರುತ್ತದೆ. ಈ ಕುರಿತು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಈಗ ಆ ಗಾಯದ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿ.ಪಿ.7 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಲಾದ ಗಾಯ ಒಬ್ಬ ವ್ಯಕ್ತಿಗೆ ಬ್ಲೇಡ್ ನಿಂದ ಹಲ್ಲೆ ಮಾಡಿದರೆ ಆಗುವ ಸಂಭವ ಇರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

3. ಆರೋಪಿ ಪರ ವಕೀಲರನ್ನು ಕೂಗಿಸಿದ್ದು ಗೈರು ಹಾಜರಿರುತ್ತಾರೆ. ಆದ ಕಾರಣ ಅವರ ಪರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಶಿಲ್ಪಾ ಕೆ.ಎಸ್.)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.